ಕೊತ್ನಳ್ಳಿ ದಲಿತರ ಮೇಲೆ ಪೋಲೀಸ್ ದೌರ್ಜನ್ಯ

[ಪಂಚಮ ಪ್ರತಿನಿಧಿಯಿಂದ]

ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ ಕಾಡು ಕೊತ್ತನಹಳ್ಳಿಯಲ್ಲಿ ಪೋಲೀಸರು ಇತ್ತೀಚೆಗೆ ದಲಿತರ ಮೇಲೆ ನಡೆಸಿದ ಪಾಶವೀಕೃತ್ಯ ನಾರಾಯಣಪುರದ ಘಟನೆಯನ್ನು ನೆನಪಿಗೆ ತಂದುಕೊಡುತ್ತದೆ.

ತನ್ನ ಗದ್ದೆಯಲ್ಲಿ ಬೆಳೆದ ಬತ್ತದ ಪೈರನ್ನು ನಾಶಗೊಳಿಸಿದ್ದಾರೆ ಎಂದು ದಲಿತರ ಬದ್ಧ ವೈರಿ ನಂಜುಂಡೇಗೌಡನು ನೀಡಿದ ಗುಮಾನಿ ದೂರಿನ ಮೇಲೆ ಕಾಳಮುದ್ದನದೊಡ್ಡಿ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ನಾಗರಾಜ್ ತನ್ನ ಸಿಬ್ಬಂಧಿಯೊಡನೆ ಅಕ್ಟೋಬರ್ 16 ಮತ್ತು 20 ರಂದು ಕಾಡ-ಕೊತ್ತನಹಳ್ಳಿ ದಲಿತರ ಕೇರಿಗೆ ಹಠಾತ್ ದಾಳಿ ನಡೆಸಿ ಸಿಕ್ಕಸಿಕ್ಕವರನ್ನು ಹೊಡೆದು ಬಡಿದು 19 ಜನರನ್ನು ಬಂಧಿಸಿ ಠಾಣೆಯಲ್ಲಿ ಬೆತ್ತಲೆಗೊಳಿಸಿ ಚಿತ್ರಹಿಂಸೆ ನೀಡಿದ.

ಯಜಮಾನನಿಗೆ ಹುಟ್ಟಿದ ಈ ಸಬ್ ಇನ್ಸ್‌ಪೆಕ್ಟರ್ ನಂಜುಂಡೇಗೌಡನ ಖಾಸಾಗೆಳೆಯ. ಗೆಳೆಯನಿಗಾಗಿ ತನ್ನ ಪ್ರಾಣವನ್ನೇ ಕೊಡಲು ಸಿದ್ಧ ಎಂದು ಹೇಳಿಕೊಂಡಿರುವ ಈ ನಾಗರಾಜ್ ಅಂದು ಮನೆ ಮನೆಗೆ ನುಗ್ಗಿ ಹೆಂಗಸರು, ಮಕ್ಕಳು, ಮುದುಕರೆನ್ನದೆ ಕೈಗೆ ಸಿಕ್ಕವರನ್ನೆಲ್ಲ ಹುಚ್ಚಾಬಟ್ಟೆ ಬಡಿದು "ಹೊಲತಿ ಮುಂಡೇರ ನಿಮ್ಮ ಗಂಡಂದಿರ್ನ ತೋರ್ಸಿ; ಇಲ್ದಿದ್ರೆ ಸೀರೆ ಬಿಚ್ಚಿ ಬೆಂಕಿ ಹಚ್ಚಿ ಸುಟ್ಟಬಿಡ್ತೀನಿ" ಎಂದು ಬಾಯಿಗೆ ಬಂದಂತೆ ಬೈದು ಬೆದರಿಕೆ ಹಾಕಿದ.

"ದಲಿತೋದ್ಧಾರದ ಜಪ ಮಾಡುವ ಕಾಂಗ್ರೆಸ್ ಸರ್ಕಾರವೇ ದಲಿತರ ಬಗ್ಗೆ ನಿಜವಾದ ಪ್ರಾಮಾಣಿಕ ಕಳಕಳಿ ಹೊಂದಿದ್ದರೆ ದಲಿತರ ಮೇಲೆ ಪಾಶವೀಕೃತ್ಯ ನಡೆಸಿದ ಈ ನಾಗರಾಜನನ್ನು ಒದ್ದೋಡಿಸಲಿ" ಎಂದು ದಲಿತರು ಅಕ್ಟೋಬರ್ 21 ರಿಂದ 26ರವರೆಗೆ ಮಂಡ್ಯಕ್ಕೆ ಬಂದು ಜಿಲ್ಲಾ ಪೋಲೀಸ್ ಕಚೇರಿ ಮುಂದೆ ಧರಣಿಯನ್ನು ಮತ್ತು ಜಿಲ್ಲಾ ದಲಿತ ಸಂಘರ್ಷ ಸಮಿತಿ ನೇತೃತ್ವದಲ್ಲಿ ನವೆಂಬರ್ 2 ರಂದು ಪ್ರತಿಭಟನಾ ಮೆರವಣಿಗೆ ನಡೆಸಿ ಒತ್ತಾಯಿಸಿದ್ದಾರೆ. ಆದರೂ ಈ ಯಮನಪುತ್ರನ ವಿರುದ್ಧ ಇನ್ನೂ ಯಾವುದೇ ಕ್ರಮ ತೆಗೆದುಕೊಳ್ಳದಿರುವುದು ಖಂಡನೀಯ.

ನಾಗರಾಜನ ಈ ಹೇಯ ಕೃತ್ಯಕ್ಕೆ ಬೆಂಬಲವಾಗಿ ನಿಂತ ಮತ್ತೊಬ್ಬ ಪೋಲೀಸ್ ಅಧಿಕಾರಿ ಮಳವಳ್ಳಿ ತಾಲ್ಲೂಕು ಸರ್ಕಲ್ ಇನ್ಸ್‌ಪೆಕ್ಟರ್ ರಾಮಚಂದ್ರಯ್ಯ.

ಬತ್ತದ ಪೈರನ್ನು ನಾಶಗೊಳಿಸಲಾಗಿದೆ ಎನ್ನಲಾದ ಸಂಬಂಧದಲ್ಲಿ ಸ್ಥಳ ಮಹಜರ್‌ಗೆ ಬಂದ ರಾಮಚಂದ್ರಯ್ಯ ನಾಗರಾಜ್‌ಗೆ ಬೆಂಬಲವಾಗಿ ವರ್ತಿಸಿದ.

(2ನೇ ಪುಟ ನೋಡಿ)

ಪಂಚಮ

ಎಲ್ಲ ಬಗೆಯ ಆರ್ಥಿಕ, ಧಾರ್ಮಿಕ, ಸಾಮಾಜಿಕ, ಬೌದ್ಧಿಕ ದಬ್ಬಾಳಿಕೆಯ ವಿರುದ್ಧ ದಲಿತರಲ್ಲಿ ಪ್ರಜ್ಞೆ ಮೂಡಿಸಲು ಯತ್ನಿಸುತ್ತಿರುವ ಪಂಚಮಕ್ಕೆ ಚಂದಾದಾರರಾಗಿರಿ.

ಲೇಖನ – ಸುದ್ದಿ ಕಳುಹಿಸುವ ಮೂಲಕ ನೋವುಳ್ಳವರ ನುಡಿಯಾಗಿರುವ ಪಂಚಮವನ್ನು ನಿಮ್ಮ ದನಿಯನ್ನಾಗಿಸಿಕೊಳ್ಳಿ.

ಸಂಪುಟ : 4 ಸಂಚಿಕೆ : 17–18 5, ನವೆಂಬರ್ 1980 ಪಾಕ್ಷಿಕ ಬೆಲೆ : 20 ಪೈಸೆ ವಾರ್ಷಿಕ ಚಂದಾ 5 ರೂ.ಗಳು

ರೈತ ಚಳವಳಿಗೆ ಡಿಯಸಸ್ ಬೆಂಬಲ

ಇಡೀ ಕೃಷಿಕ್ಷೇತ್ರದ ಆಶಯಗಳನ್ನು ಪ್ರತಿಬಿಂಬಿಸುವ ರಾಜ್ಯಾದ್ಯಂತ ಭುಗಿಲೆದ್ದಿರುವ ರೈತ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ರಾಜ್ಯ ದಲಿತ ಸಂಘರ್ಷ ಸಮಿತಿ ನಿರ್ಧರಿಸಿದೆ.

ರಾಜ್ಯ ಸಂಚಾಲಕ ಬಿ. ಕೃಷ್ಣಪ್ಪ ಅವರ ಅಧ್ಯಕ್ಷತೆಯಲ್ಲಿ ಅಕ್ಟೋಬರ್ 22ರಂದು ಶಿವಮೊಗ್ಗದಲ್ಲಿ ನಡೆದ ರಾಜ್ಯ-ಸಮಿತಿ ಸಭೆಯು ಈವರೆಗೆ ಅನೇಕ ಕಡೆ ನಡೆದ ರೈತ ಚಳುವಳಿಯ ಹಿನ್ನೆಲೆ-ಮುನ್ನೆಲೆಗಳನ್ನು ವಿಮರ್ಶಿಸಿ ರೈತರ ಬೇಡಿಕೆಗಳು ನ್ಯಾಯ ಸಮ್ಮತವೂ ಆಗಿರುವುದೆಂದು ತನ್ನ ಪೂರ್ಣ ಬೆಂಬಲಕ್ಕೆ ಒಮ್ಮತ ಬಂದಿತು.

ತನ್ನ ಕೈಕಾಲು-ದೇಹವನ್ನೇ ಬಂಡವಾಳ, ಆಸ್ತಿಯನ್ನಾಗಿ ಮಾಡಿಕೊಂಡು ಮೈಳೆ ಬಿಸಿಲೆನ್ನದೆ ದುಡಿಯುವ ಕೃಷಿ ಕಾರ್ಮಿಕನೇ ಕೃಷಿಕ್ಷೇತ್ರದ ನಿಜವಾದ ಉತ್ಪಾದಕನಾಗಿದ್ದರೂ ಆತನ ಮೂಲಭೂತ ಬೇಡಿಕೆಗಳನ್ನು ಮಲಪ್ರಭ, ಘಟಪ್ರಭ ಮತ್ತು ಶಿವಮೊಗ್ಗ ಚಳವಳಿಗಳು ಕಡೆಗಣಿಸಿದ್ದರ ಬಗ್ಗೆ ಸಭೆ ತನ್ನ ಆತಂಕ ವ್ಯಕ್ತಪಡಿಸಿತು.

ಶಿವಮೊಗ್ಗ ಚಳವಳಿಯಲ್ಲಿ ಶೇ. 70ಕ್ಕೂ ಹೆಚ್ಚು ದಲಿತರೇ ಭಾಗವಹಿಸಿ ಜೈಲು ಕಂಡಿದ್ದರಿಂದ ಆ ವರ್ಗದ ನೋವುಗಳನ್ನು ಯಾವುದೇ ಚಳುವಳಿ ಮನವರಿಕೆ ಮಾಡಿಕೊಳ್ಳಬೇಕೆಂದು ಅಭಿಪ್ರಾಯಪಡಲಾಯಿತು.

ಈದಿನ ರೈತ ಚಳುವಳಿಗಳು ಮುಖ್ಯವಾಗಿ ಕೃಷಿ ಕಾರ್ಮಿಕರಿಗೆ ವೇತನ ಏರಿಕೆ, ಭೂಹೀನರಿಗೆ

(6ನೇ ಪುಟ ನೋಡಿ)

ಪ್ರತಿಕ್ರಿಯೆ

'ಹಂಪನಾ ವಿರುದ್ಧ ಪ್ರದರ್ಶನ ನಡೆಸಿ'

ತಮ್ಮ ಪತ್ರಿಕೆಯ ಕಳೆದ ಸಂಚಿಕೆಯಲ್ಲಿ ಹಂಪನಾ ಅವರು ಗಿರಿಜನರಾಗಲು ಮಾಡಿದ ವಿಫಲ ಪ್ರಯತ್ನವನ್ನು ಕುರಿತು ಶಕುನಯ್ಯನವರು ಬರೆದಿರುವ ಲೇಖನವನ್ನು ಓದಿದೆನು. ಹಂಪನಾ ಅವರ ಬಗ್ಗೆ ನಾನು ಇಟ್ಟುಕೊಂಡಿದ್ದ ಕೊಂಚ ಗೌರವವೂ ಇಲ್ಲವಾಯಿತು. ವಿನೇ ಆಗಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಈ ಮಟ್ಟಕ್ಕೆ ಹೋಗಬಾರದಿತ್ತು. ದುರಾಸೆ ಒಬ್ಬ ಮನುಷ್ಯನನ್ನು ಯಾವ ಸ್ಥಿತಿಗೆ ತರುತ್ತದೆ ಎಂಬುದಕ್ಕೆ ಇದು ಉತ್ತಮ ಉದಾಹರಣೆ.

ಹಂಪನಾ ಅವರ ಪುತ್ರ ಗಿರಿಜನ ಎಂದು ಸರ್ಟಿಫಿಕೇಟ್ ಕೊಟ್ಟ ತಹಸೀಲ್ದಾರರು ಯಾರು? ಅದನ್ನು ಪಡೆದ ವಿಧಾನ ಯಾವುದು? ಇದನ್ನು ಬಹಿರಂಗಗೊಳಿಸಬೇಕು. ಇದರ ಬಗ್ಗೆ ತನಿಖೆ ಆಗಲಿ. ಹಂಪನಾ ಅವರು ದಲಿತರನ್ನು ಕ್ಷಮೆ ಕೇಳಬೇಕು. ಅಷ್ಟೇ ಅ. ಅಲ್ಲ ಸರ್ಟಿಫಿಕೇಟನ್ನು ಸರ್ಕಾರಕ್ಕೆ ಹಿಂದಿರುಗಿಸಬೇಕು. ದಲಿತರ ಹೊಟ್ಟೆ ಮೇಲೆ ಹೊಡೆಯಲು ಹಂಪನಾ ಅವರಿಗೆ ಏನು ಕಡಿಮೆ ಆಗಿದೆ? ಈ ರೀತಿ ಇನ್ನೂ ಅನೇಕರು ಮಾಡುತ್ತಿದ್ದಾರೆ. ವ್ಯಾಪಕವಾಗಿ ಹಬ್ಬುತ್ತಿರುವ ಈ ರೀತಿಯ 'ದಲಿತರಾಗುವ ದುರಾಸೆ'ಯನ್ನು ಖಂಡಿಸಿ ದಲಿತ ಸಂಘರ್ಷ ಸಮಿತಿಯವರು ಒಂದು ಚಳುವಳಿಯನ್ನು ಮಾಡಲಿ. ಇದಕ್ಕೆ ಮೊದಲ ಹಂತವಾಗಿ ದಲಿತರು ಹಂಪನಾ ಅವರನ್ನು ಖಂಡಿಸಿ ಪರಿಷತ್ತಿನ ಎದುರು ಸಾಂಕೇತಿಕ ಪ್ರದರ್ಶನ ಮಾಡುವುದಾದರೆ ನಾನು ಈ ಚಳುವಳಿಯಲ್ಲಿ ಭಾಗವಹಿಸುತ್ತೇನೆ.

ಮೈಸೂರು —ಎಂ. ಡಿ. ಕೆಂಪಯ್ಯ

'ರಾಷ್ಟ್ರಧ್ವಜಕ್ಕೆ ಅಪಮಾನ'

ಕಳೆದ ಎರಡು ತಿಂಗಳ ಪಂಚಮ ಪತ್ರಿಕೆಗಳಲ್ಲಿ 'ಮನಜ' ಅವರ ಕವನಗಳನ್ನೋದಿದೆ. ಸ್ವತಂತ್ರದ ಬಗ್ಗೆ 'ಆಗಸ್ಟ್ ಹದಿನೈದು' ಎಂಬ ಕವನವಮ್ಮ ರಾಷ್ಟ್ರದ ಧ್ವಜಕ್ಕೆ ಮಾಡಿದ ಅವಮಾನವಾಗಿದೆ. ಸ್ವಾತಂತ್ರ್ಯಕ್ಕೂ ಮತ್ತು ದಲಿತ ಬಾಂಧವರಿಗೂ ಇವರು ಹೇಳುವ ರೀತಿಯ ಸಂಬಂಧವಂತೂ ಖಂಡಿತವಾಗಿಯೂ ಇಲ್ಲ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಹಸ್ರಾರು ಜನ ದಲಿತ ಬಾಂಧವರು ಪ್ರಾಣತೆತ್ತಿದ್ದಾರೆ. ಆದರೆ ಅಂದು ಶೂದ್ರ-ಬ್ರಾಹ್ಮಣ, ಬಡವ-ಬಲ್ಲಿದನೆಂಬ ಭೇದ ಭಾವವೇ ಇರಲಿಲ್ಲ. ಸ್ವಾತಂತ್ರ್ಯ ಧ್ವಜವನ್ನು ಬೈಯುವುದರ ಬದಲು ಶ್ರಮದಾನವಿದ್ದೂ ಅದರ ಪ್ರತಿಫಲ ಪಡೆಯದಿರುವ ದಲಿತನೊಬ್ಬನ ನೋವನ್ನ ಇನ್ನೂ ಸ್ಪಷ್ಟವಾಗಿ ಪ್ರತಿಬಿಂಬಿಸಬಹುದಾಗಿತ್ತು. ಈ ಕವಿ ಮಹಾಶಯರು(?) ಬುಡಾಯುದ ಮಂಪರಿನಲ್ಲಿ ಬಾಯ್ಗೆ ಬಂದಂತೆ ಬಡಬಡಿಸಿದ್ದಾರೆ. ಸ್ವತಂತ್ರ ದೇವಿಯ (ಅಥವಾ ಭಾರತಾಂಬೆಯ) ತೂತಿಗೆ ಧ್ವಜದ ಕಂಬವನ್ನು ಸಿಗಿಸಲು ಪ್ರತಿಜ್ಞೆ ಮಾಡುವ ಅಸಹ್ಯ ಪ್ರವೃತ್ತಿಯನ್ನು ತೋರಿದ್ದಾರೆ

ಇನ್ನು ಅಕ್ಟೋಬರ್ ಸಂಚಿಕೆಯಲ್ಲಿ ಪ್ರಕಟವಾಗಿರುವ 'ಗಾಂಧಿಯ ನೆನಪು' ಕವನದಲ್ಲಿ ಅನೇಕ ಸಂಶೋಧನೆಗಳನ್ನು ಕೈಗೊಂಡು ಇತರರಿಗೆ ಮಾದರಿಯಾಗಿದ್ದಾರೆ. ಗಾಂಧೀಜಿಗೆ 'ರಾಷ್ಟ್ರಪಿತ' ಎಂಬ ಬಿರುದು ಬಂದದ್ದು ನೆಹರು ಕ್ಯಾಬಿನೆಟ್ಟಿನವರು ಮಾಡಿದ ಪರದೆಯ ಹಿಂದಿನ ರಾಜಕೀಯದಂತೆ! ಅವರು ಸಾಬರುಗಳ ಮಾಂಸವನ್ನು ಕಾಯುವ ದೊಣ್ಣೆಯಂತೆ! 'ನೀವು ಎಂದಾದರೂ ಆರೆಸ್ಸೆಸ್‌ಗೆ ಹೋಗಿದ್ದಿರಾ ರೆಸ್ಪೆಕ್ಟೆಡ್ ಸರ್?' ಎಂದು ಕೇಳುವ ಇಂತಹವರಿಗೆ ಏನೆನ್ನಬೇಕು'? ಇವರ ಪ್ರಕಾರ ಗಾಂಧಿ ಸಾಬರ ಮಾಂಸವನ್ನು ಕಾದ ದೊಣ್ಣೆ; ದಲಿತರನ್ನು ಇಲಿಯಂತೆ ಬಡಿಯಲು ಬಂದ ದೊಣ್ಣೆ. ಇದು ಸತ್ಯವೇ? ಗಾಂಧೀ ಮತ್ತು ಅಂಬೇಡ್ಕರ'ರವರ ವಾದಗಳಲ್ಲಿ ಭಿನ್ನಾಭಿಪ್ರಾಯ ವಿರಬಹುದು. ಆದರೆ ಇಬ್ಬರೂ ದಲಿತ ಹಿತೈಷಿಗಳೇ. ಹಿತೈಷಿಯಲ್ಲದಿದ್ದರೂ ಶತ್ರುವಂತು ಖಂಡಿತವಾಗಿಯೂ ಅಲ್ಲ ಅವರನ್ನು 'ಹರಿಜನರ ಪೊಲಿಟಿಕಲ್ ತಂದೆ'ಯೆಂದು ವ್ಯಂಗ್ಯವಾಗಿ ಕರೆಯುವ ಇದರ ದೃಷ್ಟಿಯಲ್ಲಿ ಗಾಂಧಿ ಹಾಗೆ ಕಾಣಬಹುದೇ ಹೊರತು ಬೇರೆಯವರಿಗಲ್ಲ.

ತುಮಕೂರು —ಪುರದಹಳ್ಳಿ ಜಯಣ್ಣ

ಕೊತ್ತನಹಳ್ಳಿ ದಲಿತರ ಮೇಲೆ ಪೋಲೀಸ್ ದೌರ್ಜನ್ಯ

(1ನೇ ಪುಟದಿಂದ)

ಜಿಲ್ಲಾ ಪೋಲೀಸ್ ಅಧಿಕಾರಿಯವರು ತಮಗೆ ನೀಡಿರುವ ಅನುಮತಿ ಮೇರಗೆ ಜಾಮೀನಿನ ಮೇಲೆ ಬಂಧಿತರನ್ನು ಬಿಡಬೇಕೆಂದು ಕೆಲವು ದಲಿತರು ರಾಮಚಂದ್ರಯ್ಯನನ್ನು ಕೇಳಿಕೊಂಡಾಗ "ಅವರು ಜಾಮೀನಿನ ಮೇಲೆ ಬಿಡುಗಡೆ ಹೊಂದದ ಅಪರಾಧ ಎಸಗಿದ್ದಾರೆ" ಎಂದು ಹೇಳಿದ. ತನ್ನ ಹಿರಿಯ ಅಧಿಕಾರಿಗಳ ಅನುಮತಿಯನ್ನು ಕೇರ್ ಮಾಡದಷ್ಟು ನಂಜುಂಡೇಗೌಡನ ನಾನಾ ಪ್ರಭಾವಕ್ಕೆ ಈತ ಒಳಗಾಗಿದ್ದಾನೆಂದು ದಟ್ಟ ವದಂತಿ.

ಈ ಘಟನೆಗೆ ಒಂದು ವಿವಾದದ ಹಿನ್ನೆಲೆಯೇ ಇದೆ. ಊರಿನ ವೀರಭದ್ರಸ್ವಾಮಿ ದೇವಸ್ಥಾನದ ಸುಮಾರು 80 ಎಕರೆ ಇನಾಂ ಜಮೀನು ಇದ್ದು, ಅದರಲ್ಲಿನ ಸರ್ವೆ ನಂ. 208ರ ಜಮೀನಿನಲ್ಲಿ ಹರಿಜನರು ಊರು ಹುಟ್ಟಿದಾಗಿನಿಂದ ಸತ್ತ ತಮ್ಮ ಜನಗಳ ಹೆಣಗಳನ್ನು ಹೂಳುತ್ತ ಬಂದಿದ್ದಾರೆ. ಈ ಸ್ಮಶಾನದ ಪಕ್ಕದಲ್ಲೇ ನಂಜುಂಡೇಗೌಡನ ಅಪ್ಪ ದ್ಯಾವರಸೇಗೌಡ ಜಮೀನು ಕೊಂಡುಕೊಂಡಿದ್ದ. ಅಪ್ಪ ಸತ್ತ ನಂತರ ದುರಾಸೆ ಹೆಚ್ಚಿಸಿಕೊಂಡ ನಂಜುಂಡೇಗೌಡ ಸ್ಮಶಾನವನ್ನು ಸೇರಿಸಿಕೊಂಡಂತೆ ಸುಮಾರು ಎರಡುವರೆ ಎಕರೆ ಹೆಚ್ಚು ಅಕ್ಕಪಕ್ಕದ ಜಮೀನಿಗೆ ಸುಳ್ಳು ಪಹಣಿ ಬರೆಸಿಕೊಂಡು ಹರಿಜನರು ಅಲ್ಲಿ ಹೆಣ ಹಾಕದಂತೆ ಅನೇಕ ವರ್ಷಗಳಿಂದ ಕಿರುಕುಳ ಕೊಡುತ್ತಾ ಬಂದಿದ್ದಾನೆ.

ಹರಿಜನ ಕೇರಿಯಲ್ಲಿ ಯಾರಾದರೂ ಸತ್ತರೆಂದರೆ ಅಂದು ನಂಜುಂಡೇಗೌಡನ ಜತೆ ಕಾದಾಟ ನಿಶ್ಚಯವಾದದ್ದು. ಹರಿಜನರ ಸ್ಮಶಾನವನ್ನು ಲಪಟಾಯಿಸಿಕೊಂಡು ಅಲ್ಲಿ ತನ್ನೊಬ್ಬನನ್ನೇ ಹೂಳಿಸಿಕೊಳ್ಳಬೇಕೆಂದಿರುವ ನಂಜುಂಡೇಗೌಡ ಹರಿಜನರಿಗೆ ಸರಿಯಾಗಿ ಬುದ್ಧಿಕಲಿಸಬೇಕೆಂದು ತನ್ನ ಗದ್ದೆಯಲ್ಲಿ ಬತ್ತದ ಪೈರು ಕೊಯ್ದಿದ್ದಾರೆಂದು ಸುಳ್ಳುದೂರು ನೀಡಿ ದಲಿತರನ್ನು ಪೋಲೀಸರಿಂದ ಹೊಡೆಸುತ್ತಿದ್ದಾನೆ ಎಂಬುದು ಕಾಡುಕೊತ್ತನಹಳ್ಳಿಗೆ ಹೋದವರಿಗೆ ತಿಳಿಯುವ ಸತ್ಯಸಂಗತಿ.

ಈ ಕೂಲಿ ತಂಗಿಯ ನಿಗೂಢ ಕೊಲೆ ತನಿಖೆಯಾಗಲಿ

(ಪಂಚಮ ಪ್ರತಿನಿಧಿಯಿಂದ]

ನಿಗೂಢವಾಗಿಯೇ ಇರುವ ನನ್ನ ಕೂಲಿಯ ...ಂದಿ ಕು॥ ಲಕ್ಕಮ್ಮಳ (18) ಕೊಲೆಯನ್ನು ...ನಿಖೆ ನಡೆಸಿ ಕೊಲೆಗಡುಕರನ್ನು ಶಿಕ್ಷಿಸಿ" ಇದು ...ಂಗಳೂರಿನ ಕಾಮಾಕ್ಷಿಪಾಳ್ಯದ ಹರಿಜನ ...ಲೋನಿ ಸಂಜೀವಯ್ಯ ಅವರು ಉನ್ನತ ...ಪೊಲೀಸ್ ಅಧಿಕಾರಿಗಳಿಗೆ ಮಾಡಿಕೊಂಡಿರುವ ...ಃಖಪೂರಿತ ಮನವಿ.

...ಡತನದಲ್ಲಿ ನರಳುತ್ತಿರುವ ಮನೆಗೆ ಕೂಲಿ ...ಮಾಡಿ ಒಂದಿಷ್ಟು ನೆರವಾಗಿದ್ದ ಲಕ್ಕಮ್ಮ ಎಂಬ ...ಯುವತಿಯನ್ನು ತನ್ನ ಬಳಿ ಕೂಲಿಮಾಡಿಸುತ್ತಿದ್ದ ...ಮಲಾನಗರದ ಬಿಲ್ಡಿಂಗ್ ಮೇಸ್ತ್ರಿ ಹೊನ್ನಪ್ಪ ...26) ಎಂಬಾತನೇ ಕೊಲೆ ಮಾಡಿದ್ದಾನೆಂದು ...ಂಕಿಸಲಾಗಿದೆ.

...ಕ್ಟೋಬರ್ 12, ಅಂದು ಭಾನುವಾರ ಸಂಜೆ ...ುಮಾರು 4 ಗಂಟೆ. ಲಕ್ಕಮ್ಮ ತನ್ನ ತಾಯಿ ...ಳಿ ಐದು ರೂ. ಕೇಳಿ ಪಡೆದು ಬಿನ್ನಿಪೇಟೆ ...ಯಲ್ಲಿರುವ ಅಣ್ಣ ಮುನಿಯಪ್ಪನ ಮನೆಗೆಹೋಗಿ ...ಬರುವುದಾಗಿ ಹೊರಟಳು.

...ಆಕೆ ಮನೆಯಿಂದ ಹೊರಗೆ ಹೋಗುತ್ತಿದ್ದಂತೆ ದಾರಿಯಲ್ಲಿ ನಿಂತಿದ್ದ ಮೇಸ್ತ್ರಿ ಹೊನ್ನಪ್ಪ ಬಲವಂತವಾಗಿ ಆಕೆಯನ್ನು ಸೈಕಲ್ ಮೇಲೆ ಕೂರಿಸಿಕೊಂಡು ಕಾಮಾಕ್ಷಿಪಾಳ್ಯದಿಂದ ರಾಜಾಜಿನಗರದತ್ತ 80 ಅಡಿ ರಸ್ತೆಯಲ್ಲಿ ಹೋಗುತ್ತಿದ್ದುದನ್ನು ತಾನು ಕಂಡುದುದಾಗಿ ತಮ್ಮ ಕಾಲೋನಿಯ ಬಾಲಕ ಬೈಲ (12) ತಮ್ಮ ಮನೆಗೆ ಬಂದು ಸುಮಾರು 7 ಗಂಟೆಯಲ್ಲಿ ತಿಳಿಸಿದ.

ಮನೆಮಂದಿಯಲ್ಲ ಲಕ್ಕಮ್ಮನಿಗಾಗಿ ಹುಡುಕಾಡಿದೆವು. ಆಕೆ ಸಿಗಲಿಲ್ಲ. ಮರುದಿನ ಬೆಳಿಗ್ಗೆ ಸೋಮವಾರ ಕಾಮಾಕ್ಷಿಪಾಳ್ಯದ ಬಳಿ ಇರುವ ಕೆರೆಯೊಂದರಲ್ಲಿ ಆಕೆಯ ಶವ ಬಿದ್ದಿದುದು ಕಂಡುಬಂತು.

ಲಕ್ಕಮ್ಮನ ಕೊಲೆ ಬಗ್ಗೆ ವಿಜಯನಗರ ಪೊಲೀಸ್ ಠಾಣೆಗೆ ದೂರು ಮುಟ್ಟಿಸಲಾಯಿತು, ಬೈಲ ಹೇಳಿದ ಘಟನೆಯನ್ನೆಲ್ಲ ವಿಷದವಾಗಿ ವಿವರಿಸಿ, ಲಕ್ಕಮ್ಮನ ಕೊಲೆಗೆ ಹೊನ್ನಪ್ಪನೇ ಕಾರಣವೆಂದು ದೂರು ನೀಡಲಾಯಿತು.

ಈ ದೂರಿನ ನಂತರ ಹೊನ್ನಪ್ಪ 14-10-80 ರಂದು ಖುದ್ದಾಗಿ ಪೊಲೀಸ್ ಠಾಣೆಗೆ ಬಂದು "ತಾನು ಸೈಕಲ್‌ನಲ್ಲಿ ಲಕ್ಕಮ್ಮನನ್ನು ಕರೆದುಕೊಂಡು ಹೋಗುತ್ತಿದ್ದುದು ನಿಜ. ಆಕೆಯನ್ನು ಅಂದು ಸಂಜೆ 6-30ರಲ್ಲಿ ದಾಸರಹಳ್ಳಿಯ ಜೈಮುನಿರಾವ್ ಸರ್ಕಲ್ ಬಳಿ ಬಿಟ್ಟೆ. ನಂತರ ಆಕೆ ಎಲ್ಲಿಗೆ ಹೋದಳೋ ಏನೋ ಗೊತ್ತಿಲ್ಲ" ಎಂದು ಹೇಳಿಕೆ ನೀಡಿದ್ದಾನೆ.

ಈ ನಿಜಸಂಗತಿ ಹೊರಬಂದಿದ್ದರು ಶಂಕೆಯ ಮೇಲಾದರೂ ಪೊಲೀಸರು ಆರೋಪಿಯನ್ನು ಬಂಧಿಸುವುದಾಗಲಿ ಅಥವಾ ತನಿಖೆ ಮುಂದುವರಿಸುವುದಾಗಲಿ ಏನನ್ನು ಮಾಡುತ್ತಿಲ್ಲ ಎನ್ನುತ್ತಿರುವ ಕುಟುಂಬವನ್ನು ಈಗ ಆವರಿಸಿರುವ ದುಃಖ "ನಮ್ಮ ಈ ಬಡ ಹೆಣ್ಣುಮಕ್ಕಳ ಜೀವಕ್ಕೆ ಏನಾದರೂ ಬೆಲೆ ಇದೆಯೆ ?"

ದಲಿತರಿಗೆ ಅನೇಕ ಕಡೆ ಸಾಮಾಜಿಕ ಬಹಿಷ್ಕಾರ

ಗುಲಬರ್ಗಾ ಜಿಲ್ಲೆಯ ನಾನಾ ಹಳ್ಳಿಗಳಲ್ಲಿ ಬಹಿರಂಗವಾಗಿಯೇ ಅಸ್ಪೃಶ್ಯತೆಯನ್ನು ಆಚರಿಸಲಾಗುತ್ತಿದ್ದು ಅದನ್ನು ಪ್ರತಿಭಟಿಸಿದ ದಲಿತರಿಗೆ ಸಾಮಾಜಿಕ ಬಹಿಷ್ಕಾರ ಹಾಕುವುದು ಸಾಮಾನ್ಯವಾಗಿ ಹೋಗಿದೆ. ಎಷ್ಟೋ ಹಳ್ಳಿಗಳಲ್ಲಿ ಆರ್ಥಿಕವಾಗಿ ಹಿಂದುಳಿದವರಾಗಿದ್ದರೂ ದಲಿತರು ಸ್ವಾಭಿಮಾನಕ್ಕಾಗಿ ಚಡಪಡಿಸುತ್ತಿರುವುದು ಎದ್ದು ಕಾಣುವ ಅಂಶವಾಗಿದೆ.

ಗುಲಬರ್ಗಾಕ್ಕೆ ಕೇವಲ 2-3 ಕಿ. ಮೀ. ದೂರದಲ್ಲಿರುವ ಹಳ್ಳಿಗಳಾದ ಚಿಂಚೋಳಿ, ರಾಜಾಪುರ, ಕೋಟನೂರ್ ಮೊದಲಾದ ಹಳ್ಳಿಗಳಲ್ಲಿ ಅಸ್ಪೃಶ್ಯತೆ ಆಚರಿಸಲಾಗುತ್ತಿದೆ. ಕೋಟನೂರ್ ದಲಿತರಿಗೆ ಹಾಕಲಾಗಿದ್ದ ಸಾಮಾಜಿಕ ಬಹಿಷ್ಕಾರದ ಬಗ್ಗೆ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಕಲಬುರ್ಗಿ ಜಿಲ್ಲಾ ಘಟಕವು ಪ್ರತಿಭಟಿಸಿದಾಗ ಬಹಿಷ್ಕಾರವನ್ನು ತೆಗೆಯಲಾಗಿತ್ತು. ಆದರೆ ಈಗ ಮತ್ತೆ ಅಸ್ಪೃಶ್ಯತೆಯನ್ನು ಆಚರಿಸಲಾಗುತ್ತಿರುವುದರ ಬಗ್ಗೆ ಅಲ್ಲಿಯ ದಲಿತರು ದೂರು ನೀಡಿದ್ದಾರೆ.

ಆಳಂದ ತಾಲ್ಲೂಕು ಮಾದನಹಿಪ್ಪರಗ ಗ್ರಾಮದಲ್ಲಿ ಆಚರಿಸುತ್ತಿದ್ದ ಅಸ್ಪೃಶ್ಯತೆಯನ್ನು ದೂರ ಮಾಡಲು ಡಿಯುಸೆಸ್ ಶ್ರವಿ.ಸಿ ಯಶಸ್ವಿಯಾಗಿದೆ.

ತಿಪಟೂರು ತಾಲ್ಲೂಕಿನಲ್ಲಿ

ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕಿನ ಕುಂದಾಪುರ ಗ್ರಾಮದಲ್ಲೂ ಹರಿಜನರ ಮೇಲೆ ಸವರ್ಣೀಯರು ಇತ್ತೀಚೆಗೆ ಸಾಮಾಜಿಕ ಬಹಿಷ್ಕಾರ ಹಾಕಿ ಅನೇಕ ಬಗೆಯಲ್ಲಿ ಕಿರುಕುಳ ಕೊಡುತ್ತಿದ್ದಾರೆಂದು ವರದಿಯಾಗಿದೆ.

ಬೋವಿಗಳಿಗೆ ಬಹಿಷ್ಕಾರ

ಕೋಲಾರ ತಾಲ್ಲೂಕು ಚೋಳಘಟ್ಟಗ್ರಾಮದ ಬೋವಿ ಜನಾಂಗದ ಮೇಲೆ ಸವರ್ಣೀಯರು ಅಕ್ಟೋಬರ್ 9ರಿಂದ ಸಾಮಾಜಿಕ ಬಹಿಷ್ಕಾರ ಹಾಕಿದ್ದಾರೆ. ಈ ಸಾಮಾಜಿಕ ಬಹಿಷ್ಕಾರವನ್ನು ಈ ಕೂಡಲೇ ರದ್ದುಗೊಳಿಸುವಂತೆ ಮಾಡಿ ಬೋವಿಜನರ ಜೀವನಸ್ಥಿತಿ ಸುಧಾರಿಸಿ ಮಾನವರಂತೆ ಬದುಕುವ ಪರಿಸ್ಥಿತಿ ಉಂಟು ಮಾಡದಿದ್ದರೆ ಜಿಲ್ಲಾಧಿಕಾರಿ ಕಚೇರಿ ಮುಂದೆ ಧರಣಿ ನಡೆಸಿ ಹೋರಾಟ ಮಾಡುವುದಾಗಿ ದಲಿತ ಸಂಘರ್ಷ ಸಮಿತಿ ಕೋಲಾರ ಜಿಲ್ಲಾ ಶಾಖೆ ಸರ್ಕಾರಕ್ಕೆ ಎಚ್ಚರಿಕೆ ಕೊಟ್ಟಿದೆ.

ದಲಿತ ನುಡಿ

ದೇಶಕ್ಕೆ ತಳಪಾಯ ದಲಿತರ ಕೇರಿಗಳು. ಜನಾಂಗಕ್ಕೆ ತಳಪಾಯ ದಲಿತ ಪ್ರಜೆಗಳು. ತಳಪಾಯಗಳನ್ನು ನಿರ್ಲಕ್ಷಿಸಿ, ಮಹಾಸೌಧಗಳನ್ನು ನಿರ್ಮಿಸಲು ಯತ್ನಿಸಿದ್ದರಿಂದಲೇ ಎಷ್ಟೋ ಮಂದಿ ಮಹಾನಾಯಕರು ವಿಫಲರಾದರು. ಎಷ್ಟೋ ಹೋರಾಟಗಳು ವ್ಯರ್ಥವಾದವು. ಎಷ್ಟೋ ಪ್ರಣಾಳಿಕೆಗಳು ಮಣ್ಣುಪಾಲಾದವು.

—ಬೋಯಿಭೀಮನ್ನ

ರೈತ ಚಳುವಳಿಗೆ ಬೆಂಬಲ

(1ನೇ ಪುಟದಿಂದ)

ಭೂಮಿ ಹಂಚಿಕೆ ಮತ್ತು ಗ್ರಾಮೀಣ ನಿರುದ್ಯೋಗಿಗಳಿಗೆ ಉದ್ಯೋಗ ಭರವಸೆಯ ಬೇಡಿಕೆಗಳನ್ನು ಅಳವಡಿಸಿಕೊಳ್ಳುವ ಮೂಲಕ ಚಳವಳಿಯನ್ನು ಮತ್ತಷ್ಟು ಅರ್ಥವತ್ತಾಗಿ ಮತ್ತು ವ್ಯಾಪಕವಾಗಿ ಚುರುಕುಗೊಳಿಸುವ ಅಗತ್ಯವನ್ನು ಸಭೆ ಒತ್ತಾಯಿಸಿತು.

ರಾಜ್ಯದ ಯಾವುದೇ ಮೂಲೆಗಳಲ್ಲಿ ನಡೆಯುವ ರೈತ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂದು ರಾಜ್ಯಸಮಿತಿ ತನ್ನ ಎಲ್ಲಾ ಶಾಖೆಗಳಿಗೆ ಸೂಚನೆ ಕೊಟ್ಟಿತು.

ಲಂಕೇಶರ ಮೇಲಿನ ಹಲ್ಲೆಗೆ ಡಿಯಸೆಸ್ಸ್ ಖಂಡನೆ

ಸಾಹಿತಿ ಮತ್ತು ನಿರ್ಭೀತ ಪತ್ರಕರ್ತ ಪಿ ಲಂಕೇಶ್ ಅವರ ಮೇಲೆ ವಾಟಾಳ್ ನಾಗರಾಜ್‌ರ ಕನ್ನಡ ಚಳವಳಿಗಾರರು ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ನಡೆಸಿದ ಗೂಂಡಾಗಿರಿ ಹಲ್ಲೆಯು ಅತ್ಯಂತ ಹೇಯವಾದುದು ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಬೆಂಗಳೂರು ಜಿಲ್ಲಾ ಸಂಚಾಲಕ ವೆಂಕಟಸ್ವಾಮಿ ಅವರು ಖಂಡಿಸಿದ್ದಾರೆ.

ಜಾತಿಗಳ ಹುಟ್ಟು ಮತ್ತು ಬೆಳವಣಿಗೆ

(ಮಧ್ಯದ ಪುಟದಿಂದ)

ಪ್ರಶ್ನೆಯೇ ಹುಟ್ಟಲಿಲ್ಲ. ಹೊಸರೀತಿಯ ಆಲೋಚನೆಯೇ ಹೊಸಜಾತಿಯ ಹುಟ್ಟಿಗೆ ಕಾರಣವಾಯಿತು. ಭಿನ್ನವಾಗಿ ಯೋಚಿಸುವ ಪ್ರವಾದಿ ಮತ್ತು ಅಂತರ್ಜಾತೀಯ ಸಂಬಂಧಗಳನ್ನು ಇಟ್ಟುಕೊಂಡ ಪ್ರೇಮಿ ಇವರಿಬ್ಬರೂ ಜಾತಿಪದ್ಧತಿಯ ಸಮಾಜಕ್ಕೆ ಸಿಂಹಸ್ವಪ್ನರಾಗಿ ಪರಿಣಮಿಸಿದರು. ಪ್ರವಾದಿ ತನ್ನ ಹೊಸ ಚಿಂತನೆಗಳ ನೆಲೆಯಲ್ಲಿ ಜಾತಿಯೊಂದನ್ನು ಸೃಷ್ಟಿಸಿದರೆ ಪ್ರೇಮಿ ಮಿಶ್ರತಳಿಯ ಇನ್ನೊಂದು ಜಾತಿಯನ್ನು ಸೃಷ್ಟಿಸುತ್ತಿದ್ದ. ಸಾಂಪ್ರದಾಯಿಕ ಸಮಾಜದಲ್ಲಿ ಪಾಪಿ ಎನಿಸಿಕೊಂಡ ಈತನಿಗೆ ಸಾಮಾಜಿಕ ಬಹಿಷ್ಕಾರವೇ ಶಿಕ್ಷೆ. ಇದರ ಪರಿಣಾಮವಾಗಿ ಹೊಸ ಜಾತಿಯ ಉದ್ಭವ. ಇದರ ಜೊತೆಗೆ ಯಾಂತ್ರಿಕವಾಗಿ ಬಾಗಿಲು ಮುಚ್ಚಿಕೊಂಡ ಜಾತಿಗಳಿಗೆ ಅದು ಅನಿವಾರ್ಯವಾಗಿತ್ತು. ಈ ಅನಿವಾರ್ಯತೆ ಜಾತಿಗಳು ದ್ವಿಗುಣಗೊಳ್ಳಲು ಕಾರಣವಾಯಿತು.

ಪಾಶ್ಚಿಮಾತ್ಯ ವಿದ್ವಾಂಸರು ಜಾತಿಯನ್ನು ವಿವರಿಸಲು ಬಣ್ಣವನ್ನು ಪ್ರಮಾಣವಾಗಿ ಬಳಸಿದರು. ಈ ದಿಕ್ಕಿನಲ್ಲಿ ಇದು ಅಪ್ರಯೋಜನಕಾರಿ. "ಎಲ್ಲಾ ರಾಜಕುಮಾರರು ದ್ರಾವಿಡ, ಆರ್ಯ ಯಾರೇ ಆಗಲಿ ಅವರೆಲ್ಲಾ ಆರ್ಯರು. "ಎಂಬ ಕೀಕ್ಕರ್‌ರವರ ಮಾತು ಔಚಿತ್ಯ ಪೂರ್ಣವಾದದ್ದು, ಚರ್ಮದ ಬಣ್ಣ ತನ್ನ ಪ್ರಾಮುಖ್ಯತೆಯನ್ನು ಭಾರತದಲ್ಲಿ ಎಂದೋ ಕಳೆದುಕೊಂಡಿತ್ತು. ಪಾಶ್ಚಿಮಾತ್ಯ ವಿದ್ವಾಂಸರು ನಮ್ಮ ಶಾಸ್ತ್ರ ಗ್ರಂಥಗಳನ್ನು ಜಾತಿಪದ್ಧತಿಯ ಹುಟ್ಟನ್ನು ವಿವರಿಸುವ ಸಿದ್ಧಾಂತಗಳೆಂದು ಭ್ರಮಿಸಿ ಅವುಗಳನ್ನು ಆಶ್ರಯಿಸಿದ್ದರು. ಜಾತಿಗಳು ಧಾರ್ಮಿಕವೃತ್ತಿಗೆ ಅನುಗುಣ ಎಂಬುದು ನಿಜವಾದರೂ ಅದೇ ಕಾರಣವಲ್ಲ. ಜಾತಿಗಳು ವೃತ್ತಿಗೆ ಜೋತುಬಿದ್ದ ಕಾರಣವನ್ನು ಇನ್ನೂ ಅಧ್ಯಯನ ಮಾಡಬೇಕಾಗಿದೆ. [ಮುಗಿಯಿತು]

ಡಿ. ಎಸ್. ಎಸ್. ಆರಂಭ

ಕರ್ನಾಟಕ ದಲಿತ ಸಂಘರ್ಷ ಸಮಿತಿಯ ವಿದ್ಯಾರ್ಥಿ ಸಂಘಟನೆ 'ದಲಿತ ವಿದ್ಯಾರ್ಥಿರಂಗ' (Dalit Student Front) ಇತ್ತೀಚೆಗೆ ರಾಯಚೂರು ಮತ್ತು ಗುಲ್ಬರ್ಗಾದಲ್ಲಿ ಆರಂಭವಾಯಿತು.

ನನ್ನ ಜನ

ನನ್ ಜನ್ರವ್ವಾ ಇವ್ರು ನನ್‌ಜನ್ರು

ಹೊಲಾ ಕುಯ್ದೋರು, ರಾಗಿ
ಬಡ್ದೋರು
ಹಸನ್ಮಾಡಿ ಕಣಜಕ್ ತುಂಬ್ದೋರು
ಹಿಟ್ಟಿಗಾಗಿ ಕೊರಗ್ದೋರು ನನ್
ಜನ್ರವ್ವಾ–ನನ್‌ಜನ್ರು

ಬತ್ತ ಬಡ್ದೋರು; ಅಕ್ಕಿ ಕೇರ್ದೋರು
ಡಬ್ಬಕ್ ತುಂಬ್ದೋರು
ಅನ್ನದ್ ಮುಖಾ ಕಾಣ್‌ದವ್ರು
ನನ್‌ಜನ್ರವ್ವಾ ನನ್‌ಜನ್ರು

ತರಕಾರಿ ಬೆಳ್ದೋರು; ಗೌಡ್ರ ಮನೇಗ್
ತುಂಬ್ದೋರು;
ಸಾರಿಲ್ದೆ ತಂಗ್ಳಿಟ್ ತಿಂದೋರು
ನನ್‌ಜನ್ರವ್ವಾ ನನ್‌ಜನ್ರು

ಊರ್‌ದನ ಕಾಯ್ದೋರು ಮಳೇಲ್-
ನೆನ್ದೋರು
ಬಿಸಿಲಲ್ ಬೆಂದೋರು; ಸುಂಟರ್
ಗಾಳಿಗೆ ಸಿಕ್ಕಿದೋರು
ನನ್‌ಜನ್ರವ್ವಾ ನನ್‌ಜನ್ರು

ಗತಿಲ್ದೆ ಹುಟ್ದೋರು ಸಾಲಕ್
ದುಡ್ದೋರು
ತಂಗ್ಳಿಟ್ಟನ್ ಖುಣಕ್ಕೆ ಮಗ್ಗು
ಲಾದೋರು ನನ್‌ಜನ್ರವ್ವಾ ನನ್‌ಜನ್ರು

—ರಮಾಕುಮಾರಿ

ವಿಶ್ವಾಸ

ನಿನ್ನೆ ಬಿಟ್ಟು ಮೊನ್ನೆ
ಸಂತೆ ಮಾಡಿ ಹಳ್ಳಿಗೆ
ಹಿಂತಿರುಗಿ ಬರುವಾಗ
ಕತ್ತಲಾಗಿತ್ತು.
ಅಂದೇಕೋ ತುಸು ತಡವಾಗಿತ್ತು.
ದೆವ್ವನಂತ ಉದ್ದುದ್ದ ಕಂಬಗಳನ್ನು
ನಿಲ್ಲಿಸಿದ್ದರೂ ವಿದ್ಯುತ್ ಬೆಳಕನ್ನು
ಕಾಣದ ನನ್ನ ಹಳ್ಳಿ
ಹಾಳು ಕೊಂಪೆಯಾಗಿತ್ತು.
ಆ ಕತ್ತಲಲ್ಲಿ ಗೌಡರ ಮನೆಯ
ಮುಂದೆ ಹಾಯ್ದು ಬರುವಾಗ
ಬೆಳಕಿನಲ್ಲಿ ಚೆಂಗನೆ ಹಾರಿಬಂದ
ನಾಯಿ ನನ್ನ
ಹಿಂಗಾಲನ್ನು ಕಚ್ಚಿಬಿಟ್ಟಿತ್ತು.
ಮನೆಯೊಳಗಿಂದ ಗೌಡತಿ
ಬರುವಷ್ಟರೊಳಗೆ
ಈ ಕೆಲಸ ಮುಗಿದಿತ್ತು.
ಕಚ್ಚಿದ ನಾಯಿ ಗೌಡತಿಸುತ್ತ
ತಿರುಗುತ್ತಾ ಮೂಸುತ್ತಿತ್ತು.
ಒಂದು ಕ್ಷಣ ತಬ್ಬಿಬ್ಬಾಗಿ ಕಚ್ಚಿದ
ಗಾಯವನ್ನು ಸ್ಪರ್ಶಿಸಿದಾಗ
ತಣ್ಣಗಿನ ಅನುಭವ!
ಜೊತೆಗೆ ನಗಬೇಕೆನಿಸಿತು
ಕಾರಣ
ನಾನು ಆ ನಾಯಿಯ
ಮಾಜಿ ಯಜಮಾನ!

—ಬೋಳ ಬಂಡೆಪ್ಪ

ಉತ್ತಮ ಆಡಳಿತದಲ್ಲಿ 'ನಿಧಾನ' 'ತಡೆಗೆ' ಎಡೆಯಿಲ್ಲ

ಕರ್ನಾಟಕದ ಮಾನ್ಯ ಮುಖ್ಯ ಮಂತ್ರಿಗಳಾಗಿ ಶ್ರೀ ಗುಂಡೂರಾವ್ ಅವರು ಅಧಿಕಾರ ವಹಿಸಿಕೊಂಡ ಕೇವಲ ಒಂಭತ್ತು ತಿಂಗಳ ಅವಧಿಯಲ್ಲಿ ಅವರು ನೀಡಿದ ಹಲವಾರು ಆಶ್ವಾಸನೆಗಳಲ್ಲಿ ಮುಖ್ಯವಾದದ್ದು 'ದಕ್ಷ ಆಡಳಿತ' ತಮ್ಮ ಆಶ್ವಾಸನೆಯನ್ನು ಕಾರ್ಯ ರೂಪಕ್ಕೆ ತರಲು ಜಡಭರಿತ ಕಡತಗಳ ವಿಲೇ ಮಾಡಲಾಗಿದೆ. ಇಂದು ರಾಜ್ಯೋತ್ಸವದಂದು ಯಾವುದೇ ಒಂದು ಹಳೇ ಕಡತವು ಪರಿಹಾರ ಕಾಣದೇ ಉಳಿದಿಲ್ಲ? ಕೆಲವೇ ತಿಂಗಳಲ್ಲಿ ಸರ್ಕಾರ ನೀಡಿದ ಆಶ್ವಾಸನೆಗಳೇನು ? ಸಾಧನೆಗಳೇನು ? ಎಂಬುದನ್ನು ಗಮನಿಸಿದಾಗ...

ಉತ್ತಮ ಆಡಳಿತ ನಡೆಸುವ ಛಲ. ಅನುಗುಣವಾಗಿ ನಡೆಯುವ ಆಶಯ ಆಶ್ವಾಸನೆಗೆ

ಶಾಂತಿಪಾಲನೆ, ಪ್ರಗತಿ ಸಾಧನೆ, ಕಲ್ಯಾಣ ಸ್ಥಾಪನೆ. ಇಂತಹ ಹತ್ತು ಹಲವಾರು ಕಾರ್ಯಕ್ರಮಗಳನ್ನು ಜಾರಿಗೆ ತರುವ ಆಶ್ವಾಸನೆಗಳ ಸರಮಾಲೆ.

ಈ ಹೊಸ ಸರ್ಕಾರ ಒಂಭತ್ತು ತಿಂಗಳ ಹಿಂದೆ ಅಧಿಕಾರ ವಹಿಸಿಕೊಂಡಾಗ ಒಂದು ಪ್ರಮಾಣ ವಚನವನ್ನು ಸ್ವೀಕರಿಸಿತು.

'ಕೇವಲ ಆಶ್ವಾಸನೆ ನೀಡುವುದಲ್ಲ......ನೀಡಿದಂತೆ ನಡೆಯುವುದು' ಅಧಿಕಾರ ವಹಿಸಿಕೊಂಡ ಒಂಭತ್ತು ತಿಂಗಳ ಈ ಅಲ್ಪ ಸಮಯದಲ್ಲೇ ಸರ್ಕಾರ ತನ್ನ ಆಶ್ವಾಸನೆಗಳನ್ನು ಹಲವು ವಿಧಗಳಲ್ಲಿ ಕಾರ್ಯ ರೂಪಕ್ಕೆ ತಂದಿದೆ.

ಶಿಫಾರಸು, ಪ್ರಭಾವಗಳ ಪಲಾಯನ

ಹೂಂ ಯಾರಿಗೆ ಎಲ್ಲಿಗೆ ಬೇಕು ಅಲ್ಲಿಗೆ ವರ್ಗ ! ಯೋಗ್ಯತೆ ಇರಲಿ ಬಿಡಲಿ ಕೊಡಿ ಅವನಿಗೆ ಬಡ್ತಿ! ಇದು ಕತ್ತಲಲ್ಲಿ ಕಂಡ ಕನಸಲ್ಲ... ಸರಿಯಾದ ಪ್ರಭಾವ ಬೀರುವ ವ್ಯಕ್ತಿಯನ್ನು ಹಿಡಿದಲ್ಲಿ ಹಿಂದಿನ ದಿನಗಳಲ್ಲಿ ಏನು ಬೇಕಾದರೂ ಸಾಧಿಸಬಹುದಾಗಿತ್ತು. ಆದರೆ ಈಗ ಅದೆಲ್ಲ ಗತಕಾಲದ ಕಥೆ. ಇಂದು, ಕಾಯಿದೆ, ಕಟ್ಟಳೆಗಳು ಎಲ್ಲರಿಗಾಗಿ, ಸಾರ್ವಜನಿಕರ ಹಿತಕ್ಕಾಗಿ, ಕೇವಲ ಕೆಲವೇ ಜನರ ಹಕ್ಕಲ್ಲ ಎಂಬುದನ್ನು ಎಲ್ಲರಿಗೂ ಮನದಟ್ಟು ಮಾಡಲಾಗಿದೆ.

ಪ್ರಭಾವಿ ವ್ಯಕ್ತಿಗಳ ಹಿಂದೆ ಮುಂದೆ ಇದ್ದು ಕಾರ್ಯಸಾಧನೆಗಳನ್ನು ಮಾಡುತ್ತ ಮೆರೆಯುತ್ತಿದ್ದವರ ಸೊಲ್ಲು ಇಲ್ಲವಾಗಿದೆ.

ಕಡತಗಳು...ಕಣ್ಣು ಬಾಯ್ಬಿಟ್ಟು, ಉಸಿರುಕಟ್ಟಿ ಇನ್ನು ಕಾಯಬೇಕಾಗಿಲ್ಲ

ಸರಕಾರದ ಅಪ್ಪಣೆಗಾಗಿ, ಉತ್ತರಕ್ಕಾಗಿ ಕಳುಹಿಸಿದ ಕಾಗದ ಕಡತ ಸೇರಿ, ಜಡಭರಿತವಾಗುತ್ತ ಪ್ರತಿಭಾರಿಯೂ ನಿಧಾನ, ತಡಕ್ಕೆ ಒಂದೊಂದು ಕಾರಣ ಕೇಳುತ್ತಿದ್ದುದು...ಮತ್ತೊಂದು ಗತಕಾಲದ ಮಾತು.

ಪ್ರತಿಯೊಂದು ವಿಷಯದಲ್ಲೂ ಶೀಘ್ರಗತಿ, ನಿಷ್ಠೆ, ಕಾರ್ಯ ತತ್ಪರತೆಯ ಮಹತ್ವವನ್ನು ರಾಜ್ಯಮಟ್ಟದಿಂದ ತಾಲ್ಲೂಕು ಮಟ್ಟದವರೆಗೂ ಎಲ್ಲ ವಲಯಗಳಲ್ಲೂ ಇದೇ ನಿಲುವು ಮನವರಿಕೆ ಮಾಡಲಾಗಿದೆ.

ಈಗ ನಿರ್ಮಿಸಿರುವ ವಾತಾವರಣದಲ್ಲಿ ಯಾರು ತಮ್ಮ ಕೆಲಸಗಳಿಗಾಗಿ ಅಲೆದಾಡುವ ಅವಶ್ಯಕತೆಯಿಲ್ಲ. ಅಪ್ಪಾಕಿ ನಿಮ್ಮ ಮನೆಬಾಗಿಲಲ್ಲೇ ನಿಮ್ಮ ಅಗತ್ಯಗಳೆಲ್ಲವುಗಳ ಪೂರೈಕೆ.

ಕೆಲವು ನಿದರ್ಶನಗಳನ್ನು ನೀಡುವುದಾದರೆ ಕಡತಗಳ ವಿಲೇವಾರಿಯು ಈ ಎರಡು ತಿಂಗಳಲ್ಲಿ ಸುಮಾರು $2\frac{1}{2}$ ಲಕ್ಷ ಫೈಲುಗಳು ವಿಲೇವಾರಿಯಾಗಿವೆ. ಕೋರ್ಟಿನ ತೀರ್ಮಾನಕ್ಕಾಗಿ ಕಾದಿರುವ ಕಡತಗಳು ಮಾತ್ರ ಇನ್ನೂ ತೀರ್ಮಾನವಾಗಬೇಕಾಗಿದೆ.

ಜಡತ್ವಕ್ಕೆ ಜಾಗವಿಲ್ಲ

ಸರ್ಕಾರ ಕೈಗೊಂಡ ಮತ್ತೊಂದು ಪ್ರಮುಖ ನಿರ್ಧಾರ ನಾಯಿಕೊಡೆಗಳಂತೆ ಹುಟ್ಟಿದ ಹತ್ತು ಹಲವಾರು ಅನಾವಶ್ಯಕ ಮಂಡಲಿ ಸಮಿತಿಗಳ ರದ್ದು, ನಾನಾ ರೀತಿಯ 36 ಅನುಪಯುಕ್ತ ಸಂಸ್ಥೆಗಳ ರದ್ದು, ಸಾರ್ವಜನಿಕ ಬೊಕ್ಕಸಕ್ಕೊಂದು ಭಾರಿ ಉಳಿತಾಯ.

ಪಾತಕಿ ಪಾರ್ಥೇನಿಯಂ

ನಗರದ ಸುತ್ತಮುತ್ತಲಿನಲ್ಲಿ ಹರಡಿ, ಅಳಿದ ಪಾರ್ಥೇನಿಯಂನ್ನು ನಿರ್ಮೂಲನಗೊಳಿಸಿ ಸುಂದರ ನಗರದ ಸಸ್ಯಸಂಪತನ್ನು ಹೆಚ್ಚಿಸುವ,

ಈ ಭಯಂಕರ ಕಳೆ ಪಾತಕ ಎಂಬುದನ್ನು ಅರಿತು ಈಗಾಗಲೇ 2,000 ಎಕರೆಗೂ ಹೆಚ್ಚು ಕಳೆಯನ್ನು ಕಿತ್ತು ಧ್ವಂಸ ಮಾಡಬೇಕಾಗಿದೆ. ರಾಜ್ಯದ ಎಲ್ಲ ಭಾಗಗಳಿಗೂ ಈ ಕಾರ್ಯಕ್ರಮವನ್ನು ವಿಸ್ತರಿಸಲಾಗುತ್ತದೆ.

ಒಮ್ಮತದಿಂದ ಒಂದಾಗುವ

ರೈತಬಾಂಧವನ ಕ್ಷೇಮಾಭಿವೃದ್ಧಿಗೆ ಸರ್ಕಾರ ಎಂದಿಗೂ ಬದ್ಧ, ಅವರ ಹಿತಾಸಕ್ತಿಯನ್ನು ಕಾಪಾಡುವುದೇ ಸರ್ಕಾರದ ಹಂಬಲ. ರೈತರ ಸಮಸ್ಯೆಗಳನ್ನು ಕೂಲಂಕುಷವಾಗಿ ತಿಳಿಯಲು ಸರ್ಕಾರದಿಂದ ಸಮಿತಿಯೊಂದರ ನೇಮಕ. ರೈತರ ಈಗಿನ ಅಶಾಂತಿಯಿಂದ ಮಾತ್ರ ಸರ್ಕಾರ ಜಾಗೃತವಾಗಲಿಲ್ಲ. ರೈತರ ಹಿತರಕ್ಷಣೆಯ ದೃಷ್ಟಿಯಿಂದ ಸರ್ಕಾರ ಅವರಿಗೆ ದೊರಕಿಸಿಕೊಟ್ಟಿರುವ ಸೌಲಭ್ಯಗಳು ಹಲವಾರು,

ಪ್ರಥಮ ಹಾಗೂ ಮುಖ್ಯವಾದದ್ದು ಒಂದು ಕೋಟಿ ರೂಪಾಯಿಗಳ ನೇರ ಪರಿಹಾರ ರೈತರ ಕಲ್ಯಾಣಕ್ಕಾಗಿ ಸುಮಾರು 85 ಕೋಟಿಗಳ ವೆಚ್ಚದಲ್ಲಿ ನೀರಾವರಿ, ಕೃಷಿಸಾಧನ ಉತ್ತಮ ಹೈಬ್ರಿಡ್ ತಳಿ, ರಸಗೊಬ್ಬರ ಮುಂತಾದವುಗಳ ನೀಡಿಕೆ. ನೀರುದರ, ಅಭಿವೃದ್ಧಿ ತೆರಿಗೆಗಳ ರದ್ದು, ನೀರೆತ್ತುವ ಪಂಪಿಗೆ ಬಳಸುವ ವಿದ್ಯುತ್ ದರದಲ್ಲಿ ಕಡಿತ, ಕೃಷಿ ಉತ್ಪನ್ನಗಳ ಮೇಲಿನ ತೆರಿಗೆಯನ್ನು ಸಣ್ಣ ಮತ್ತು ಮಧ್ಯಮ ಹಿಡುವಳಿದಾರರ ತಕಾವಿ ಬಾಕಿಯ ರದ್ದು ಮುಂತಾದವು ರೈತರ ಒಳಿತಿಗಾಗಿಯೇ ಕೈಗೊಂಡ ಕ್ರಮಗಳು.

ಕೃಷಿ ವಿಮಾ ಯೋಜನೆ ಪ್ರಸ್ತುತ ಐದು ತಾಲ್ಲೂಕುಗಳಲ್ಲಿ ಪ್ರಾಯೋಗಿಕವಾಗಿ ಪ್ರಾರಂಭವಾಗಿದೆ. ಇಷ್ಟರಲ್ಲೇ ಈ ಸೌಲಭ್ಯ ಇತರ ರೈತರಿಗೂ ದೊರೆಯಲಿದೆ.

ಕಬ್ಬು, ಕಡ್ಲೇಕಾಯಿಗೆ ಕನಿಷ್ಠ ದರದ ನಿಗದಿಯಲ್ಲದೇ ರೈತರಿಗೆ ಹೆಚ್ಚಿನ ಪರಿಹಾರ ಹಾಗೂ ರಿಯಾಯಿತಿಗಳನ್ನು ನೀಡಲಾಗಿದೆ. ಈ ಪುನರ್ವಿಮರ್ಶಿತ ದರ ನಿಗದಿ ಕೇಂದ್ರಸರ್ಕಾರ ಶಿಫಾರಸು ಮಾಡಿರುವುದಕ್ಕಿಂತ ಆಕರ್ಷಕವಾಗಿದೆ, ವ್ಯವಸಾಯಕ್ಕೆ ನೀಡಬೇಕಾದ ಪ್ರಾಧಾನ್ಯತೆಯನ್ನು ನೀಡಲಾಗಿದೆ-ರೈತರಿಗೆ ದೊರಕಬೇಕಾದಂತಹ ಎಲ್ಲ ಸವಲತ್ತುಗಳನ್ನು ದೊರಕಿಸಲಾಗಿದೆ. ಜೀವವಿಮೆ, ಕ್ಷೇಮನಿಧಿ ಮುಂತಾದ ಸೌಲಭ್ಯಗಳನ್ನು ರೂಪಿಸಿ ಅವರ ಆರ್ಥಿಕ ಸಂಪತ್ತನ್ನು ಸುಧಾರಿಸಲು ಮಹತ್ತರ ಹೆಜ್ಜೆ ಇಡಲಾಗಿದೆ. ಈ ರೀತಿಯ ಸವಲತ್ತುಗಳನ್ನು ಬೇರೆ ಯಾವ ರಾಜ್ಯಸರ್ಕಾರವೂ ಇದುವರೆವಿಗೆ ನೀಡಿಲ್ಲ.

ಆಶ್ವಾಸನೆಯನ್ನು ಇನ್ನೂ ಹಲವು ವಿಧಗಳಲ್ಲಿ ಆಚರಣೆಗೆ ತರಲಾಗಿದೆ

* ಕಲಾವಿದರಿಗೆ ಮಾಸಾಶನ, ಗೌರವಧನ.
* ನಿಮ್ನ ಮತ್ತು ಹಿಂದುಳಿದ ಪಂಗಡಗಳಿಗೆ ಹೆಚ್ಚಿನ ಉದ್ಯೋಗ ಭರವಸೆ.
* ನಿಮ್ನ ಮತ್ತು ಹಿಂದುಳಿದ ಪಂಗಡಗಳಿಗೆ ಉತ್ತಮ ಬಡ್ತಿ ಅವಕಾಶಗಳು.
* ದುರ್ಬಲ ವರ್ಗದವರಿಗಾಗಿ ಒಂದು ಲಕ್ಷ ಮನೆಗಳು.
* ಉತ್ತಮ ಗ್ರಾಮ ಸಂಪರ್ಕ ಯೋಜನೆ (18.7 ಕೋಟಿ ರೂಪಾಯಿಗಳು)
* ಪ್ರತಿ ಹಳ್ಳಿಗೂ ಕುಡಿಯುವ ನೀರಿನ ವ್ಯವಸ್ಥೆ.
* ನಿವೃತ್ತಿ ವಯಸ್ಸನ್ನು ಹೆಚ್ಚಿಸದೆ, ನಿವೃತ್ತಿಯಾದವರ ಮರು ನೇಮಕ ಮಾಡದೆ ನಿರುದ್ಯೋಗಿ ಯುವಕರಿಗೆ ಹೆಚ್ಚಿನ ಉದ್ಯೋಗಾವಕಾಶಗಳ ನೀಡಿಕೆ.
* ಜ್ಞಾನ ಮಂದಿರಗಳ ನಿರ್ಮಾಣ–ಶಾಲೆಯ ನಂತರ ಮಕ್ಕಳು ಅಭ್ಯಾಸ ಮಾಡಲು ದೀಪ ಮತ್ತು ಇತರ ಸಲಕರಣೆಗಳ ವ್ಯವಸ್ಥೆ,
* ಪ್ರತಿಯೊಂದು ಶಾಲೆಯಲ್ಲಿ ಶಾಲಾ ಆರೋಗ್ಯ ಕಾರ್ಯಕ್ರಮಕ್ಕೆ ಅನುಕೂಲ ಕಲ್ಪಿಸುವ ಯೋಜನೆ.
* ಆರೋಗ್ಯ ಕೇಂದ್ರಗಳಿಲ್ಲದ ಕಡೆ ಸಂಚಾರಿ ಆರೋಗ್ಯ ಕೇಂದ್ರಗಳ ವ್ಯವಸ್ಥೆ.
* ಬೀಡಿಕಾರ್ಮಿಕರು, ನೇಕಾರರು, ಮತ್ತಿತರರಿಗೆ ಗುಂಪು ವಿಮಾ ಸೌಲಭ್ಯ.

"ಆಗಲಿ ೨೫ನೇ ರಾಜ್ಯೋತ್ಸವ ದಿನ; ಸರ್ಕಾರ ಪೂರೈಸುವ ಆಶ್ವಾಸನೆಗಳ ಮಹೋತ್ಸವ ದಿನ"

ಪ್ರಕಟಣೆ: ಕರ್ನಾಟಕ ವಾರ್ತಾ ಇಲಾಖೆ, 5, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು-560001.

ನಂ: ವಾಪ್ರನಿ: ಸಿಪಿಬಿ: 80-81: 376

ದಲಿತರು ಹುಡುಕಬೇಕಾಗಿರುವ ಹುಡ್ಕೋ ಯೋಜನೆ

[ಪಂಚಮ ಪ್ರತಿನಿಧಿಯಿಂದ]

ಚಿಂತಾಮಣಿ ತಾಲ್ಲೂಕು ಗಂಡ್ರಗಾನಹಳ್ಳಿ, ವೈಜಕೂರು ಮತ್ತು ಸೀಕಲ್ ಗ್ರಾಮಗಳ ದಲಿತರಿಗಾಗಿ ಹುಡ್ಕೋ ಯೋಜನೆಯ ಅನ್ವಯ ಮನೆಗಳ ನಿರ್ಮಾಣಕ್ಕೆಂದು ಮಂಜೂರಾದ ಸಹಸ್ರಾರು ರೂಪಾಯಿಗಳ ಮೋಸ ನಡೆದಿರುವುದು ಈಗ ಬೆಳಕಿಗೆ ಬಂದಿದೆ.

ಗಂಡ್ರಗಾನಹಳ್ಳಿಗೆ 15, ವೈಜಕೂರು 6 ಮತ್ತು ಸೀಕಲ್‌ನಲ್ಲಿ 15 ಮನೆಗಳ ನಿರ್ಮಾಣಕ್ಕೆ 1978-79 ಮತ್ತು 79-80ರಲ್ಲಿ ತಲಾ ಮನೆಯೊಂದಕ್ಕೆ ಎರಡು ಸಾವಿರದಿಂದ ಎರಡೂವರೆ ಸಾವಿರ ರೂ. ಮಂಜೂರಾಗಿದ್ದರು ಸೈಟುಗಳಲ್ಲಿ ಬರೇಕಲ್ಲು ನೆಡಿಸಿ ಹಣವನ್ನೆಲ್ಲ ಜೂನಿಯರ್ ಇಂಜಿನಿಯರ್‌ಗಳು ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಲಿಯ ಸದಸ್ಯರು ತಿಂದುಹಾಕಿದ್ದಾರೆಂದು ಗೊತ್ತಾಗಿದೆ. ಈ ಮೋಸದ ಪ್ರಕರಣದಲ್ಲಿ ಟಿ. ಡಿ. ಬಿ ಯ ಹರಿಜನ ಸದಸ್ಯ ಎ. ನಾರಾಯಣಪ್ಪ ಎಂಬಾತನೂ ಸೇರಿದ್ದಾನೆ.

ಈ ವಂಚನೆ ಅರಿಯದ ದಲಿತರು ತಮಗೆ ಮನೆಗಳನ್ನು ಕಟ್ಟಿಕೊಡುತ್ತಾರೆಂದು ಇನ್ನೂ ಆಸೆಗಣ್ಣಿನಿಂದ ಸರ್ಕಾರದತ್ತ ನೋಡುತ್ತಿದ್ದಾರೆ.

ಬೀದಿಗಿಳಿದು ಹೋರಾಡಲು ದಲಿತ ನೌಕರರಿಗೆ ಕರೆ

ಅಪ್ಪ,ಅಮ್ಮಂದಿರ ಮೇಲೆ ದೌರ್ಜನ್ಯ ನಡೆಯುತ್ತಿದ್ದರೂ ತಾನು 'ಅಫಿಸಿಯಲ್' ಎಂದು ಸುಮ್ಮನೆ ಕೂರುವುದನ್ನು ಬಿಟ್ಟು ದಲಿತ ನೌಕರರು ತಮ್ಮ ಜನಗಳ ಮೇಲಿನ ಎಲ್ಲ ಬಗೆಯ ಅನ್ಯಾಯಗಳ ವಿರುದ್ಧ ಬೀದಿಗಿಳಿದು ಹೋರಾಡಬೇಕೆಂದು ದಲಿತ ಕವಿ ಸಿದ್ದಲಿಂಗಯ್ಯ ಇತ್ತೀಚೆಗೆ ಕರೆಕೊಟ್ಟರು.

ಬೆಂಗಳೂರಿನ ರಿಸರ್ವ್ ಬ್ಯಾಂಕ್ ಹರಿಜನ, ಗಿರಿಜನ ನೌಕರರ ಸಂಘವು ಬ್ಯಾಂಕಿನ ಕಟ್ಟಡದಲ್ಲಿ ಆರಂಭಿಸಲಾದ ಗ್ರಂಥಾಲಯವೊಂದನ್ನು ಉದ್ಘಾಟಿಸಿ ಮಾತನಾಡುತ್ತಿದ್ದ ಅವರು ಅನೇಕ ದಲಿತ ವಿದ್ಯಾರ್ಥಿಗಳಲ್ಲಿ ಮತ್ತು ನೌಕರರಲ್ಲಿ ಆಳವಾದ ಅಧ್ಯಯನದ ಅಭಾವವಿರುವುದರಿಂದ ಆತ್ಮವಿಶ್ವಾಸ ಕಳೆದುಕೊಂಡು ಸುಳ್ಳು ಜಾತಿ ಮತ್ತು ಮೋಜಿನ ಬದುಕಿಗೆ ಮಾರುಹೋಗಿರುವುದು ದುರಾದೃಷ್ಟಕರ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಬಂಡಾಯ ಸಾಹಿತ್ಯ ಸಂಘಟನಾ ಸಮಿತಿಯ ಸಂಚಾಲಕ ಬರಗೂರು ರಾಮಚಂದ್ರಪ್ಪ ಅವರು 'ಜನಪರ ಸಂಸ್ಕೃತಿ' ಕುರಿತು ಮಾತನಾಡಿದರು. ಆರಂಭದಲ್ಲಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಎಂ. ಎಂ. ಕರಾಳೆ ಅವರು ಸ್ವಾಗತ ಕೋರಿದರು.

ಕನ್ನಡ-ಮಲೆಯಾಳಂ ಸಾಹಿತಿಗಳ ಸಮಾವೇಶ

ಕನ್ನಡ ಮತ್ತು ಮಲೆಯಾಳಂ ಸಾಹಿತಿಗಳ ಸಭೆಯೊಂದು ಅಕ್ಟೋಬರ್ 19ರಂದು ಬೆಂಗಳೂರಿನಲ್ಲಿ ನಡೆಯಿತು.

ಮೋಚನಂ ಸಾಹಿತ್ಯ ಸಂಘದ ಆಶ್ರಯದಲ್ಲಿ ಈ ಅಪೂರ್ವ ಸಮಾವೇಶದ ಅಂಗವಾಗಿ ಕಡಮ್ಮನಿಟ್ಟ ರಾಮಕೃಷ್ಣನ್ ಅವರ ಅಧ್ಯಕ್ಷತೆಯಲ್ಲಿ ನಡೆದ ಕವಿಗೋಷ್ಠಿಯಲ್ಲಿ ಜಿ. ಎಸ್. ಶಿವರುದ್ರಪ್ಪ, ದಲಿತ ಕವಿಗಳಾದ ಸಿದ್ಧಲಿಂಗಯ್ಯ, ಇಂದೂಧರ ಹೊನ್ನಾಪುರ ಹಾಗೂ ಮಲೆಯಾಳ ಕವಿಗಳಾದ ಅಯ್ಯಪ್ಪ ಪಣಿಕ್ಕರ್ ಮತ್ತು ಚಂದ್ರಶೇಖರನ್ ಕವನಗಳನ್ನು ಓದಿದರು.

ಈ ಮೊದಲು ಡಾ॥ ಯು ಆರ್. ಅನಂತಮೂರ್ತಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ದಲಿತ ಬರಹಗಾರ ದೇವನೂರ ಮಹಾದೇವ ಅವರು 'ಸಂಕ್ರಮಣ ಸಂಧ್ಯ' ಮಲೆಯಾಳಿ ನಿಯತಕಾಲಿಕೆಯನ್ನು ಬಿಡುಗಡೆ ಮಾಡಿದರು. ಪಿ. ಲಂಕೇಶ್, ಬರಗೂರು ರಾಮಚಂದ್ರಪ್ಪ, ಅಯ್ಯಪ್ಪ ಪಣಿಕ್ಕರ್ ಮಾತನಾಡಿದರು. ಆರಂಭದಲ್ಲಿ ದಲಿತ ಸಂಘರ್ಷ ಸಮಿತಿ ಅಂತರ ರಾಜ್ಯ ಸಂಚಾಲಕ ಓ. ಶ್ರೀಧರನ್ ಸ್ವಾಗತ ಕೋರಿದರು.

ಕೊನೆಯಲ್ಲಿ ಕೋಲಾರ ದಲಿತ ಕಲಾ ಮಂಡಲಿಯ ಕಾರ್ಯಕರ್ತರು "ಶೇಷಗಿರಿಯಪ್ಪನ ಕಗ್ಗೊಲೆ" ನಾಟಕ ಪ್ರದರ್ಶಿಸಿದರು.

ಝಾರ್ಖಂಡದಲ್ಲಿ ಆದಿವಾಸಿ ಆಂದೋಲನ ಹೊಗೆ

(ಮಧ್ಯದ ಪುಟದಿಂದ)

ಬಿಹಾರ ಮಿಲಿಟರಿ ಪೋಲೀಸರ ಈ ದಮನಕಾರಿ ಕೃತ್ಯಗಳಿಗೆ ಅಂಜದ ಆದಿವಾಸಿಗಳು ತಮಗೆ ಸೇರಬೇಕಾದ ಅರಣ್ಯ ಭೂಮಿಯ ಪುನಸ್ವಾಧೀನ, ಉದ್ಯೋಗ ನೀಡಿಕೆ ಮತ್ತು ಬಿ.ಎಂ.ಪಿ ಪಡೆಗಳನ್ನು ಝಾರ್ಖಂಡದ ಅರಣ್ಯ ಪ್ರದೇಶಗಳಿಂದ ಹಿಂದಕ್ಕೆ ಕರೆಸಿಕೊಳ್ಳಬೇಕೆಂದು ಮತ್ತೆ ಮೂರು ಬೇಡಿಕೆಗಳನ್ನು ಮುಂದಿಟ್ಟು ಚಳುವಳಿಯ ಈ ಕಾವನ್ನು ಹೆಚ್ಚಿಸತೊಡಗಿದ್ದಾರೆ.

ಹತ್ತೊಂಬತ್ತನೇ ಶತಮಾನದಲ್ಲಿ ಬ್ರಿಟಿಷರ ವಿರುದ್ಧ ಸತತವಾಗಿ ಬಂಡೇಳುತ್ತಿದ್ದ ಆದಿವಾಸಿಗಳ ಸಂಘಟನೆಯಲ್ಲಿ ತೊಡಗಿದ್ದ ಝಾರ್ಖಂಡ ಪಕ್ಷಗಳು ಈಗ ಅನೇಕ ಇವೆಯಾದರೂ ಝಾರ್ಖಂಡ ಮುಕ್ತಿ ಮೋರ್ಚಾ ಮಾತ್ರ ಪ್ರಬಲ ಸಂಘಟನೆ. ಆದಿವಾಸಿಗಳಲ್ಲಿ ಅದು ಮದ್ಯಪಾನ ನಿರೋಧ ಚಳುವಳಿ ಮತ್ತಿತರ ಕಾರ್ಯಕ್ರಮಗಳನ್ನು ನಡೆಸಿದೆ. ಎಪ್ಪತ್ತರ ದಶಕದಲ್ಲಿ ಲೇವಾದೇವಿಗಾರರ ವಿರುದ್ಧ ಚಳುವಳಿಯನ್ನು ಸಂಘಟಿಸುವ ಮೂಲಕ ಝಾರ್ಖಂಡ ಮುಕ್ತಿ ಮೋರ್ಚಾ ಅಸ್ತಿತ್ವಗೊಂಡಿತು. ಅನಂತರ ಅದು ಕೃಷಿ ಕ್ಷೇತ್ರಕ್ಕೆ ಕಾಲಿಟ್ಟು ನೀರಾವರಿ, ಕೆರೆಗಳ ನಿರ್ಮಾಣ ಚಳುವಳಿ ಮೂಲಕ ತನ್ನ ಬೆಳವಣಿಗೆಯನ್ನು ಕಂಡುಕೊಂಡಿತು. ಜತೆಗೆ ಆದಿವಾಸಿ ಮಕ್ಕಳಿಗಾಗಿ ಅಕ್ಷರ ಜ್ಞಾನ ಕಾರ್ಯಕ್ರಮ ನಡೆಸಿ ಅವರಿಗೆ ಹೋರಾಟದ ಪಾಠ ಹೇಳಿಕೊಟ್ಟಿತು.

1971ರ ಜನಗಣತಿ ಪ್ರಕಾರ ಝಾರ್ಖಂಡ ಪ್ರದೇಶದಲ್ಲಿ ಶೇ. 70 ಭಾಗ ಹರಿಜನರು ಮತ್ತು ಶೇ. 89 ಭಾಗ ಆದಿವಾಸಿಗಳು ಬೇಸಾಯದಲ್ಲಿ ತೊಡಗಿದ್ದರೂ ಸರ್ಕಾರದ ನಿರ್ಲಕ್ಷ್ಯತೆಗೆ ಗುರಿಯಾಗಿ ಅನ್ನ ಕಾಣದೆ ಅರೆಹೊಟ್ಟೆ, ಅರೆಬೆತ್ತಲೆ ಸ್ಥಿತಿಯಲ್ಲಿ ಕಾಡುಮೃಗಗಳೊಡನೆ ಇನ್ನೂ ಆದಿಮಾನವರಾಗಿ ದಿನಗಳನ್ನು ತಳ್ಳುತ್ತಿದ್ದಾರೆ.

Confrontation in I. T. I. Bangalore

From : PANCHAMA REPORTER

There was a confrontation in the Indian Telephone Industries, Bangalore recently between the management and the workers. The workers were demanding their share of the profit earned by the I. T. I. on the products produced by them with their sweat and blood. As per the Bonus Act this share, called bonus, should be declared within eight months from the close of the financial year i. e. thirty first March. The workers waited till the end of September. The management was in no mood to declare the bonus. The workers repeated plea met with stony silence from the management. The impatient and hardpressed workers raised their voice on 30-9-1980.

The management which was sleeping all these months suddenly woke up. It did not know who created the noice and disturbed its "Kumbhakarna Seve". It had list of employees whom it wanted deliberately to harass and victimise, prepared and kept ready in advance. Without any sitation those in the list were suspended and were handed over to the police. But luck favoured the workers. To their utter dismay and disappointment, the management later discoverd that some of the victims were not present at all in the factory on that auspecious day.

To cover up these shameful mistakes the management is working round the clock cooking up false evidence. If there were an iota of managerial talent available in ITI, the present efforts and energy could have been utilised to declare the exgratia bonus well in time and the unpleasant situation avoided.

Who will punish this incompetent mud-headed management?

ಸಬ್ ಇನ್ಸ್‌ಪೆಕ್ಟರ್ ವಿರುದ್ಧ ಪ್ರದರ್ಶನ

ಶ್ರೀನಿವಾಸಪುರ ತಾಲ್ಲೂಕು ಕೇತಗಾನಹಳ್ಳಿಯಲ್ಲಿ ಹರಿಜನರಿಗೆ ನಡೆಯುತ್ತಿರುವ ಕಿರುಕುಳದ ಬಗ್ಗೆ ಕೋಲಾರ ಜಿಲ್ಲಾ ದಲಿತ ಸಂಘರ್ಷ ಸಮಿತಿ ಸಂಚಾಲಕ ಕೆ. ಎಂ. ಮುನಿಯಪ್ಪ ಅವರು ದೂರು ನೀಡಲು ಹೋದಾಗ ಅಸಭ್ಯವಾಗಿ ವರ್ತಿಸಿದ ಪೊಲೀಸ್ ಸಬ್ ಇನ್ಸ್‌ಪೆಕ್ಟರನ ದಲಿತ ವಿರೋಧಿ ಧೋರಣೆ ಖಂಡಿಸಿ ಕೋಲಾರದಲ್ಲಿ ಸಮಿತಿಯು ಅಕ್ಟೋಬರ್ 30ರಂದು ಪ್ರತಿಭಟನಾ ಪ್ರದರ್ಶನ ನಡೆಸಿತು.

ಈ ಪತ್ರಿಕೆಯು ರಾಮದೇವ ರಾಕೆ ಅವರ ಸಂಪಾದಕತ್ವದಲ್ಲಿ, ನೂತನ್ ಪ್ರಿಂಟಿಂಗ್ ಪ್ರೆಸ್, ಬೆಂಗಳೂರು-3 ಇಲ್ಲಿ ಮುದ್ರಿಸಲ್ಪಟ್ಟು ಎಚ್. ಗೋವಿಂದಯ್ಯ ಅವರಿಂದ ಪ್ರಕಟಿಸಲ್ಪಟ್ಟಿತು. ವಿಳಾಸ : 5ಎ-ವಾಣಿ ವಾಣಿಜ್ಯಶಾಲಾ, ಪತ್ರಕರ್ತರ ಕಾಲೋನಿ. ಬೆಂಗಳೂರು-560002.